**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 26.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ಕೇಶ್ವಾಪುರದಿಂದ ಧಾರವಾಡಕ್ಕೆ ಎಷ್ಟು ದೂರ ಆಗುತ್ತದೆ ಎಂದರೆ ಸಾಕ್ಷಿ ಒಂದು ಗಂಟೆಯ ಪ್ರಯಾಣ ಎಂದು ನುಡಿಯುತ್ತಾರೆ. ಕೆಎ-25/ಹೆಚ್‌ಇ-3631 ಈ ವಾಹನವನ್ನು ಶೋರೂಂನವರು ಗಾಡಿ ರಿಪೇರಿ ಮಾಡಿದ ನಂತರ ಟ್ರಯಲ್ ಗಾಗಿ ಕರೆದುಕೊಂಡು ಹೋಗಿದ್ದರು. ಸದರಿ ಗಾಡಿ ನಮ್ಮ ಬಳಿ ಯಾವುದೇ ರೀತಿಯ ರಿಪೇರಿಗಾಗಿ ಬಂದಿರುವುದಿಲ್ಲ ಮತ್ತು ನಾವು ಅದನ್ನು ಯಾವುದೇ ಟ್ರಯಲ್ ಗೆಂದು ತೆಗೆದುಕೊಂಡು ಹೋಗಿಲ್ಲ ಎಂದರೆ ಸಾಕ್ಷಿ ಮ್ಯಾನೇಜರ್ ರವರು ನಮಗೆ ಹೇಳಿರುತ್ತಾರೆ ಎನ್ನುತ್ತಾರೆ. ಸದರಿ ಬಜಾಜ್ ಶೋರೂಂ ಸೋಮವಾರದಿಂದ ಶುಕ್ರವಾರದವರೆಗೆ ಕೆಲಸದ ವೇಳೆ ಬೆಳಿಗ್ಗೆ 10.00 ರಿಂದ 6.00 ಗಂಟೆಯವರೆಗೆ ಶನಿವಾರ ಅರ್ಧ ದಿನ ರವಿವಾರ ರಜೆ ದಿನ ಇರುತ್ತದೆ ಎಂದರೆ ಸಾಕ್ಷಿ ಸೋಮವಾರದಿಂದ ಶನಿವಾರದವರೆಗೆ ಪೂರ್ಣ ದಿನ ಮತ್ತು ಭಾನುವಾರ ರಜೆ ಇತ್ತು ಎನ್ನುತ್ತಾರೆ. ನನ್ನ ಮಗ ದೂರಿನಲ್ಲಿ ಸಂಜೆ 7.00 ಗಂಟೆಗೆ ಅಪಘಾತವಾಗಿದೆ ಎಂದು ಬರೆದಿರುತ್ತಾನೆ ಎಂದರೆ ಸಾಕ್ಷಿ ಅಪಘಾತ 5.30 ಗಂಟೆಗೆ ಆಗಿದೆ ಎನ್ನುತ್ತಾರೆ. ನನ್ನ ಮಗ ಸದರಿ ಬಜಾಜ್ ಶೋರೂಂನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದ ಎನ್ನುತ್ತಾರೆ. ಮೆಕ್ಯಾನಿಕ್ ಎಂದರೆ ಏನು ಕೆಲಸ ಎಂದರೆ ಸಾಕ್ಷಿ ಗಾಡಿಗಳನ್ನು ಬಿಚ್ಚುವುದು ಮತ್ತು ಜೋಡಿಸುವುದು ಹಾಗೂ ವೈರಿಂಗ್ ಮಾಡುವುದು ಎನ್ನುತ್ತಾರೆ. ಕೇಶ್ವಾಪುರದಲ್ಲಿ ಎಷ್ಟು ವರ್ಷಗಳಿಂದ ನೀವು ಇದ್ದೀರಿ ಎಂದರೆ ಸಾಕ್ಷಿ 5 ವರ್ಷಗಾಯಿತು ಎನ್ನುತ್ತಾರೆ. 5 ವರ್ಷಕ್ಕಿಂತ

ಮೊದಲು ನಾವು ಬಾಗಲಕೋಟೆಯಲ್ಲಿ ಇದ್ದೇವು. 5 ವರ್ಷದ ಹಿಂದೆ ನಾವು ಅಂದರೆ ನಾನು, ನನ್ನ ಮಗ ಮತ್ತು ನನ್ನ ಗಂಡ ಧಾರವಾಡಕ್ಕೆ ಬಂದೆವು. ನಮ್ಮ ಬಜಾಜ್ ಶೋರೂಂನಲ್ಲಿ ಪಿಯುಸಿ ಮತ್ತು ಐಟಿಐ ಮುಗಿಸಿದ್ದರೆ ಮಾತ್ರ ನಾವು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದರೆ ಸಾಕ್ಷಿ ಆತ ಏನು ದಾಖಲೆ ಕೊಟ್ಟಿಲ್ಲ ಕೇವಲ ಪರಿಚಯದ ಮೇಲೆ ಹೋಗಿರುತ್ತಾನೆ ಎನ್ನುತ್ತಾರೆ. ಶೋರೂಂನವರು ಸಾಮಾನ್ಯವಾಗಿ ಚಾಲನಾ ಪರವಾನಿಗೆ ಇದ್ದವರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ನನ್ನ ಮಗನಿಗೆ ಡಿ ಎಲ್ ಇತ್ತು ಅಪಘಾತವಾದ ನಂತರ ಅದು ಕಳೆದು ಹೋಗಿತ್ತು ಎನ್ನುತ್ತಾರೆ. ಶೋರೂಂ ಕಡೆಯಿಂದ ಕೆಲಸಗಾರರಿಗೆ ಐಡಿ proof ಕೊಡುತ್ತೇವೆ ಅದೇನಾದರು ನಿಮ್ಮ ಮಗನ ಬಳಿ ಇದೆಯಾ ಎಂದರೆ ಸಾಕ್ಷಿ ಅದು ಎಲ್ಲಿ ಹೋಗಿದೆಯೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಶೋರೂಂನವರು ರಜಿಸ್ಟರ್ maintain ಮಾಡುತ್ತಿದ್ದು ಆ ಪ್ರಕಾರ ಆತ ಟ್ರಯಲ್‌ಗೆ ತೆಗೆದುಕೊಂಡು ಹೋಗಿದ್ದ ಗಾಡಿ ನಮ್ಮ ಶೋರೂಂಗೆ ಬಂದೇ ಇಲ್ಲ ಎಂದರೆ ಸಾಕ್ಷಿ ಬಂದಿತ್ತು ಎನ್ನುತ್ತಾರೆ. ಶೋರೂಂನವರು ಕೆಲಸಗಾರರಿಗೆ thumb impression and ಪ್ರತಿನಿತ್ಯ ಸಹಿ ಮಾಡಿ ಬರುವಂತೆ ರಜಿಸ್ಟರ್ ಗಳನ್ನು ಮೆಂಟೇನ್ ಮಾಡುತ್ತಿದ್ದು ಈ ವಿಚಾರವನ್ನು ನಿಮ್ಮ ಮಗ ನಿಮ್ಮ ಬಳಿ ಹೇಳಿದ್ದಾನಾ ಎಂದರೆ ಸಾಕ್ಷಿ ಹೇಳಿರುತ್ತಾನೆ ಎನ್ನುತ್ತಾರೆ. ಬಜಾಜ್ ಶೋರೂಂನಿಂದ ಎಲ್ಲಾ ಕೆಲಸಗಾರರಿಗೂ ಅಕೌಂಟ್ ಮೂಲಕ ಪೇಮೆಂಟ್ ಮಾಡುತ್ತೇವೆಯೇ ಹೊರತು ಯಾರಿಗೂ ನಗದು ಮೂಲಕ ಹಣ ಕೊಡುತ್ತಿರಲಿಲ್ಲ ಎಂದರೆ ಸಾಕ್ಷಿ ಆಗ ನಗದು ಕೊಡುತ್ತಿದ್ದರು ಎನ್ನುತ್ತಾರೆ. ನನ್ನ ಮಗ ತನ್ನ ವೇತನವನ್ನು ನನಗೆ 10 ನೇ ತಾರೀಕಿನಂದು ಕೊಡುತ್ತಿದ್ದನು. ಶೋರೂಂನವರು ನಿಮ್ಮ ಮಗನ ಸಂಬಳದಲ್ಲಿ ಏನಾದರೂ ಕಡಿತ ಮಾಡಿ ಕೊಡುತ್ತಿದ್ದರಾ ಅಥವಾ 15 ಸಾವಿರ ಕೊಡುತ್ತಿದ್ದರಾ ಎಂದರೆ ಸಾಕ್ಷಿ ಹಾಗೆ ಕೊಡುತ್ತಿದ್ದರು ಎನ್ನುತ್ತಾರೆ. ಸದರಿ

ಕೇಸನ್ನು ಸುಳ್ಳಾಗಿ ನಾವು ಶೋರೂಂ ಮೇಲೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗ ಮತ್ತು ಮತ್ತೊಬ್ಬ ಬೈಕಿನಲ್ಲಿ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಿಗರಿ ಬಸ್‌ಗೆ ತಾವೇ ಡಿಕ್ಕಿಪಡಿಸಿದ್ದು ಈ ಸಂಬಂಧ ಬಸ್‌ನ ಚಾಲಕ ನನ್ನ ಮಗನ ಮೇಲೆ ದೂರು ನೀಡಿದ್ದು ಆನಂತರ ನಾವು ಈ ಬಗ್ಗೆ ಎಂವಿಸಿ ಕೇಸ್ ದಾಖಲಿಸಲು ಪ್ರಯತ್ನಿಸಿದ್ದು ನಂತರ ನನ್ನ ಮಗನ ಅತೀ ವೇಗ ಅಜಾಗರೂಕತೆ ಇದ್ದ ಕಾರಣ 2 ವರ್ಷಗಳ ನಂತರ ತಡೆದು ಯೋಚನೆ ಮಾಡಿ ಈ ಕೇಸನ್ನು ಸುಳ್ಳಾಗಿ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗನಿಗೆ 2022 ರಲ್ಲಿ ಅಪಘಾತವಾಗಿದ್ದು ನಾನು 2024 ರಲ್ಲಿ ಈ ಅರ್ಜಿ ಸಲ್ಲಿಸಿದ್ದು ಯಾವ ಕಾರಣಕ್ಕೆ 2 ವರ್ಷ ತಡವಾಗಿ ಅರ್ಜಿ ಸಲ್ಲಿಸಿದಿರಿ ಎಂದರೆ ಸಾಕ್ಷಿ ನನ್ನ ಗಂಡನಿಗೆ ಆರೋಗ್ಯ ಸರಿ ಇರಲಿಲ್ಲ ಅಂದರೆ ಬಿಪಿ ಮತ್ತು ಶುಗರ್ ಹೆಚ್ಚಾಗಿತ್ತು ಅವರು ಮಾತ್ರೆ ತೆಗೆದುಕೊಳ್ಳುತ್ತಿದ್ದರು ಎನ್ನುತ್ತಾರೆ. ನಿಮ್ಮ ಮಗ ನಮ್ಮ ಶೋರೂಂಗೆ ಯಾವತ್ತಿಗೂ ಕೆಲಸಕ್ಕೆ ಬಂದಿಲ್ಲ ಹಾಗೂ ಆತನನ್ನು ನಾವು ಕೆಲಸಕ್ಕೆ ತೆಗೆದುಕೊಂಡಿಲ್ಲ ಮತ್ತು ಯಾವತ್ತೂ ಆತ ನಮ್ಮ ಬಳಿ ಕೆಲಸ ಮಾಡಿಲ್ಲ ಆತ ಎಲ್ಲಿಯೋ ಸ್ನೇಹಿತನ ಜೊತೆ ಹೋಗಿ ಅಪಘಾತ ಮಾಡಿಕೊಂಡಿದ್ದು ಅದರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಆತ ನಮ್ಮ ಬಳಿ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಕೇಸ್ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಿಮ್ಮ ಅರ್ಜಿಯಲ್ಲಿ ಅರ್ಜಿ ಸಲಿಲಸಲು ವಿಳಂಬ ಯಾಕೆ ಆಯಿತು ಎಂದು ನಮೂದಿಸಿದ್ದೀರಾ ಎಂದರೆ ಸಾಕ್ಷಿ ಹೇಳಿಲ್ಲ ಎನ್ನುತ್ತಾರೆ. ನಿಮ್ಮ ಮಗನ ಡಿ ಎಲ್ ಹಾಜರಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅದು ಎಲ್ಲಿಯೋ ಕಳೆದು ಹೋಗಿದೆ ಎನ್ನುತ್ತಾರೆ. ನನ್ನ ಮಗನ ಆಸ್ಪತ್ರೆ ಖರ್ಚಿಗೆ ಶೋರೂಂನ ಮ್ಯಾನೇಜರ್ ರವರು ಬಂದು ಒಂದು ಲಕ್ಷ ರೂ.ಗಳನ್ನು ನೀಡಿದ್ದು ಆತನಿಗೆ ಸುಮಾರು 4.5 ಲಕ್ಷಗಳವರೆಗೆ ಖರ್ಚು ಆಗಿತ್ತು. ಸಾಕ್ಷಿಗೆ ಈ ದಿನ ನ್ಯಾಯಾಲಯದ ಮುಂದೆ ಶೋರೂಂನ ಮ್ಯಾನೇಜರ್

ರವರು ಹಾಜರಿರುತ್ತಾರೆ ಅವರಾ ನೋಡಿ ಗುರುತಿಸುತ್ತೀರಾ ಎಂದರೆ ಸಾಕ್ಷಿ ಅವರಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**